ಓಎಸ್. ನಂ.111/2022
ಪಿ.ಡಬ್ಲ್ಯೂ:1

**ದಿನಾಂಕಃ 28.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು ಃ ಪ್ರತಿವಾದಿ 9 ಪರ ಎಮ್ ಎಚ್ ವಕೀಲರಿಂದಃ**

ನನ್ನ ತಂದೆಗೆ 9 ಜನ ಮಕ್ಕಳು. ಇವರಲ್ಲಿ 3 ಜನ ಗಂಡು ಮಕ್ಕಳು, 6 ಜನ ಹೆಣ್ಣು ಮಕ್ಕಳು. ಎಲ್ಲಾ ಗಂಡು ಹಾಗೂ ಹೆಣ್ಣು ಮಕ್ಕಳು ಮದುವೆಯಾಗಿರುತ್ತದೆ. ಎಲ್ಲಾ ಹೆಣ್ಣು ಮಕ್ಕಳು ಮದುವೆಯಾದ ನಂತರ ತಮ್ಮ ಗಂಡನ ಮನೆಯಲ್ಲಿ ವಾಸಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆ-ತಾಯಿ ಇಬ್ಬರು ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡು 5 ವರ್ಷಗಳಾದವು. ನನ್ನ ತಾಯಿ ತೀರಿಕೊಂಡು 3 ವರ್ಷಗಳಾದವು. ನನ್ನ ದಾವೆಯಲ್ಲಿ ನನ್ನ ತಂದೆ-ತಾಯಿ ಯಾವತ್ತು ತೀರಿಕೊಂಡಿರುತ್ತಾರೆ ಎನ್ನುವುದನ್ನು ಹೇಳಿ ಬರೆಸಿರುತ್ತೇನೆ ಎಂದರೆ ಸರಿ.

ನನ್ನ ತವರುಮನೆಯಲ್ಲಿ ನನ್ನ ಅಣ್ಣಂದಿರಾದ ಪ್ರತಿವಾದಿ-4,5,8 ಇರುತ್ತಾರೆ. ಇವರ ಕುಟುಂಬಕ್ಕೆ ಪ್ರತಿವಾದಿ-4 ಯಜಮಾನ ಎಂದರೆ ಸರಿ. ನಮ್ಮ ಕುಟುಂಬದ ವ್ಯವಹಾರವನ್ನು ಪ್ರತಿವಾದಿ-1 ರವರು ನೋಡಿಕೊಳ್ಳುತ್ತಾರೆ. ಪ್ರತಿವಾದಿ-1 ರವರ ಮದುವೆಯಾಗಿರುತ್ತದೆ. ನಮ್ಮ ಕುಟುಂಬಕ್ಕೆ 21 ಎಕರೆ ಜಮೀನು ಇದೆ. 3 ಮನೆಗಳು ಇವೆ. ಈ ಮನೆಗಳು ಪಂಚಾಯತಿ ನಂಬರ ನನಗೆ ಗೊತ್ತಿಲ್ಲ. ಈ ಮನೆಗಳ ಬಗ್ಗೆ ನನ್ನ ವಕೀಲರಿಗೆ ಮಾಹಿತಿ ಕೊಟ್ಟಿರುವುದಿಲ್ಲ. ಈ 3 ಮನೆಗಳಲ್ಲಿ ನನಗೆ ಭಾಗ ಇದೆ. ನಮ್ಮ ಜಮೀನುಗಳ ಸರ್ವೆ ನಂ. ನನಗೆ ಗೊತ್ತಿಲ್ಲ. ಪ್ರತಿವಾದಿ-9 ರವರಿಗೆ ಮಾರಾಟ ಮಾಡಿದೆ ಜಮೀನಿನ ಸರ್ವೆ ನಂ. ಮಾತ್ರ ಗೊತ್ತಿದೆ. ಸರ್ವೆ ನಂ.62 ವಿಸ್ತೀರ್ಣ 12 ಎಕರೆ ಇತ್ತು ಇದರಲ್ಲಿ 6 ಎಕರೆ ನನ್ನ ತಂದೆ ಮಾರಾಟ ಮಾಡಿದ್ದು ನನಗೆ ಗೊತ್ತಿಲ್ಲ. ಈ ದಾವೆ ಮಾಡುವ ಪೂರ್ವದಲ್ಲಿ ಸರ್ವೆ ನಂ.62 ಎಷ್ಟಿತ್ತು ಮತ್ತು ಇದನ್ನು ಯಾರು-ಯಾರಿಗೆ ಮಾರಾಟ ಮಾಡಿದ್ದಾರೆ ಎನ್ನುವುದನ್ನು ನಾನು ತಿಳಿದುಕೊಂಡಿಲ್ಲ. ಈ ಜಮೀನು ನನ್ನ ತಂದೆ ಜೀವಂತ ಇರುವವರೆಗೆ ಆತನ ಹೆಸರಿನಲ್ಲಿ ಇತ್ತು. ನನ್ನ ತಂದೆಯ ಹೆಸರಿನಿಂದ ಪ್ರತಿವಾದಿ-4 ರವರ ಹೆಸರಿನಲ್ಲಿ ಈಗ 3 ವರ್ಷಗಳ ಹಿಂದೆ ಆಗಿರುತ್ತದೆ. ನನ್ನ ತಂದೆ 6 ಎಕರೆ ಜಮೀನನ್ನು ಯಾರಿಗೆ ಮಾರಾಟ ಮಾಡಿದ್ದಾನೆ ಅಂತ ನನಗೆ ಗೊತ್ತಿಲ್ಲ. ನನ್ನ ತಂದೆ ಸರ್ವೆ ನಂ.62/ಆ ಒಟ್ಟು ವಿಸ್ತೀರ್ಣ 7 ಎಕರೆ ಇತ್ತು 4 ಎಕರೆ 4 ಗುಂಟೆ ಜಮೀನನ್ನು ಭೀಮಣ್ಣ ತಂದೆ ಸಾಯಿಬಣ್ಣ ಬೂದಿಹಾಳ ಇವರಿಗೆ ಮಾರಾಟ ಮಾಡಿರುತ್ತಾರೆ ಎನ್ನುವುದು

ನನಗೆ ಗೊತ್ತಿಲ್ಲ. ನಾನು ಈ ದಾವೆ ಮಾಡಿದ ನಂತರ ಈ ಜಮೀನು ಮಾರಾಟ ಮಾಡಿದ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸರ್ವೆ ನಂ.62/2 ವಿಸ್ತೀರ್ಣ 2 ಎಕರೆ 36 ಗುಂಟೆ ಜಮೀನನ್ನು ಪರಸಪ್ಪ ತಂದೆ ಹಲಗಪ್ಪ ರವರಿಗೆ ಪ್ರತಿವಾದಿ-4 ಮಾರಾಟ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ನನಗೆ ಪ್ರತಿವಾದಿ-9 ರವರಿಗೆ ಜಮೀನು ಮಾರಾಟ ಮಾಡಿದ್ದು ಮಾತ್ರ ಗೊತ್ತಿದೆ.

ಸರ್ವೆ ನಂ.62 ಇದು ಮೂಲತಃ ನನ್ನ ತಾಯಿಯ ಹೆಸರಿನಲ್ಲಿ ಇತ್ತು. ನನ್ನ ತಾಯಿ ಜೀವಂತ ಇರುವಾಗಲೇ ಈ ಜಮೀನು ಪ್ರತಿವಾದಿ-4 ರವರ ಹೆಸರಿನಲ್ಲಿ ಆಗಿದೆ ಎಂದರೆ ಸರಿ. ನಮ್ಮ ಅಕ್ಕಂದಿರ ಮತ್ತು ನನ್ನ ಮದುವೆಯ ಸಾಲ ತೀರಿಸಲು ನನ್ನ ತಾಯಿ ಸರ್ವೆ ನಂ.62 ನ್ನು ಪ್ರತಿವಾದಿ-4 ರವರಿಗೆ ಬಿಟ್ಟುಕೊಟ್ಟಳು ಎಂದರೆ ಸರಿಯಲ್ಲ. ನಾವೆಲ್ಲ ಅಕ್ಕ-ತಂಗಿಯರು ಮೌಖಿಕ ಒಡಂಬಡಿಕೆ ಮೂಲಕ ಈ ಜಮೀನನ್ನು ಪ್ರತಿವಾದಿ-4 ರವರಿಗೆ ಬಿಟ್ಟುಕೊಟ್ಟೆವು ಎಂದರೆ ಸರಿಯಲ್ಲ. ನಾವೆಲ್ಲ ಅಕ್ಕ-ತಂಗಿಯರು ದಾವಾ ಐಟಂ ನಂ.2 ನ್ನು ಪ್ರತಿವಾದಿ-5 ಮತ್ತು 8 ರವರಿಗೆ ಮೌಖಿಕ ಒಡಂಬಡಿಕೆ ಮೂಲಕ ಬಿಟ್ಟುಕೊಟ್ಟಿದ್ದು ಅದೇ ಪ್ರಕಾರ ಹಕ್ಕುಬದಲಾವಣೆಯಾಗಿದೆ ಎಂದರೆ ಸರಿಯಲ್ಲ. 2016 ರಲ್ಲಿ ಪಹಣಿಯಲ್ಲಿಯು ಸಹ ಇದೇ ರೀತಿ ಮೌಖಿಕ ಒಡಂಬಡಿಕೆ ಮೂಲಕ ಬಿಟ್ಟುಕೊಟ್ಟಿದ್ದಾರೆ ಎಂದರೆ ನಮಗೆ ಗೊತ್ತಿಲ್ಲ. ನನ್ನ ಅಣ್ಣ ಪ್ರತಿವಾದಿ-4 ರವರು ನಮ್ಮ ಮದುವೆ ಸಾಲ ತೀರಿಸಲು ಸರ್ವೆ ನಂ.62 ನ್ನು ನನ್ನ ತಾಯಿಯ ಇಚ್ಚೆ ಪ್ರಕಾರ ಪ್ರತಿವಾದಿ-9 ರವರಿಗೆ ಮಾರಾಟ ಮಾಡಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಹೇಳುತ್ತಾರೆ ನಮ್ಮ ಮದುವೆಯ ಸಾಲ ಇರಲಿಲ್ಲ. ನಮ್ಮ ಕುಟುಂಬಕ್ಕೆ ಎಲ್ಲಿಯು ಸಾಲ ಇರುವುದಿಲ್ಲ. ಈಗಲೂ ಸಹ ನಮ್ಮ ಅಣ್ಣಂದಿರ ಹೆಸರಿನಲ್ಲಿರುವ ಜಮೀನುಗಳಲ್ಲಿ ಬ್ಯಾಂಕಿನ ಸಾಲ ಇದೆ ಎಂದು ಪಹಣಿಯಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ಈ ಎಲ್ಲಾ ಸಾಲ ಇರುವುದು ಮತ್ತು ಮಾರಾಟ ಮಾಡಿರುವುದು ನಮಗೆ ಗೊತ್ತಿದ್ದರು ಸಹ ಈಗ ಪ್ರತಿವಾದಿ-9 ರವರಿಗೆ ತೊಂದರೆಕೊಡಲು ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾವು ಅಕ್ಕ-ತಂಗಿಯರು ಅಣ್ಣ-ತಮ್ಮಂದಿರು ಸೇರಿ ಈ ಪ್ರತಿವಾದಿ-9 ರವರಿಗೆ ತೊಂದರೆ ಕೊಡಲು ಈ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ.62/ಆ,62/2 ಇವುಗಳನ್ನು ಮಾರಾಟ ಮಾಡಿದ್ದು ಮತ್ತು ಕ್ರಯಪತ್ರ ಮಾಡಿದ್ದು ನಮಗೆ ಗೊತ್ತಿದೆ ಎಂದರೆ ಸರಿಯಲ್ಲ. ದಾವಾ ಜಮೀನನ್ನು ಪರಸಪ್ಪ ತಂದೆ ಹಲವಪ್ಪ

ಮತ್ತು ಭೀಮಣ್ಣ ತಂದೆ ಸಾಯಿಬಣ್ಣ ಬೂದಿಹಾಳ ರವರಿಗೆ ಜಮೀನುಗಳನ್ನು ಮಾರಾಟ ಮಾಡಿದ್ದಾರೆ ಅಂತ ಪ್ರತಿವಾದಿ ಪತ್ರದಲ್ಲಿ ಬರೆದರು ಸಹ ಅವರನ್ನು ಉದ್ದೇಶ ಪೂರ್ವಕ್ಕಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ-9 ರವರಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.